# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

## ಸಿಸಿ.ನಂ. 229/2024

| | | | |
|---|---|---|---|
| ಸಾಕ್ಷಿದಾರರು | : | ಬಸವರಾಜು | ಸಿ.ಡಬ್ಲ್ಯೂ : 5 |
| ತಂದೆ ಹೆಸರು | : | ಜವರಯ್ಯ | ಪಿ.ಡಬ್ಲ್ಯೂ : 4 |
| ವಯಸ್ಸು | : | 53 ವರ್ಷ | |
| ವೃತ್ತಿ | : | ವ್ಯವಸಾಯ | |
| ವಾಸ ಸ್ಥಳ | : | ಗಿರಿಯಾರಹಳ್ಳಿ ಗ್ರಾಮ | |

ಸಾಕ್ಷಿಯನ್ನು ದಿಃ 20.05.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1.ಈಗ ತೋರಿಸಿದ ನಿಪಿ.2 ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2 ಬಿ ಎಂದು ಗುರ್ತಿಸಲಾಯಿತು. ದಿಃ 17.06.2024 ರಂದು ಅದಕ್ಕೂ ಮೊದಲು ಗಲಾಟೆಯಾದ ವಿಚಾರವಾಗಿ ಪೊಲೀಸರು ಚಾಸಾ.1 ರವರ ಜಮೀನಿನ ಬಳಿಗೆ ಮಹಜರು ಮಾಡಲು ಬಂದಿದ್ದರು. ಚಾಸಾ.1 ಮತ್ತು ಪೊಲೀಸರು ನನ್ನನ್ನು ಕರೆದು ಮಹಜರು ಮಾಡಲು ಸಹಕರಿಸಲು ಕೋರಿಕೊಂಡು ನೋಟೀಸು ಕೊಟ್ಟರು ನಾನು ಸಹಕರಿಸುವುದಾಗಿ ಒಪ್ಪಿಗೆ ನೀಡಿದೆನು. ನೋಟೀಸ್ ನಲ್ಲಿರುವ ಸಹಿ ನನ್ನದು ಎಂದು ಸಾಕ್ಷಿ ಒಪ್ಪಿದ್ದರಿಂದ ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5 ಎ ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳದ ಫೋಟೋ ತೆಗೆದು ವಿವರವಾದ

ಮಹಜರು ಬರೆದುಕೊಂಡರು. ಸ್ಥಳದಲ್ಲಿ ಬಿದ್ದಿದ್ದ ಒಂದು ಕುಡಗೋಲು ಮತ್ತು ಮರದ ದೊಣ್ಣೆಯನ್ನು ಮುಂದಿನ ಕ್ರಮಕ್ಕಾಗಿ ವಶ ಪಡಿಸಿಕೊಂಡರು. ಚಾಸಾ.1 ಮತ್ತು 6 ರವರ ನನ್ನ ಸಮಕ್ಷಮ ಇದ್ದು ನಿಪಿ.2 ಕ್ಕೆ ಸಹಿ ಮಾಡಿದರು. ಮಧ್ಯಾಹ್ನ 12.00 ರಿಂದ 12.45 ರ ತನಕ ನಿಪಿ.2 ನ್ನು ಮಾಡಿದರು. ನಿಪಿ.3 ರಲ್ಲಿರುವ ಫೋಟೋದಲ್ಲಿ ತಾನಿರುವುದಾಗಿ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ**

2. ನಾನು ವ್ಯವಸಾಯ ಮತ್ತು ಕೂಲಿ ಕೆಲಸ ಮಾಡಿಕೊಂಡಿದ್ದೇನೆ. ಕೂಲಿ ಕೆಲಸ ಎಂದರೆ ಏನು ಮಾಡುತ್ತೀರಾ ಎಂದರೆ ಸಾಕ್ಷಿ ಗಾರೆ ಕೆಲಸ, ತರಕಾರಿ ಬೆಳೆ ಕೆಲಸಕ್ಕೆ ಹೋಗುವುದಾಗಿ ಹೇಳುತ್ತಾರೆ. ಚಾಸಾ.1 ರವರು ಗುತ್ತಿಗೆ ಕೆಲಸ ಮಾಡಿಸುತ್ತಾರೆ ಎಂದರೆ ಸರಿ. ಚಾಸಾ.1 ರವರ ಕೈ ಕೆಳಗೆ ನೀವು ಕೆಲಸಕ್ಕೆ ಹೋಗುತ್ತೀರಾ ಎಂದರೆ ಸರಿಯಲ್ಲ. ಚಾಸಾ.1 ರವರು ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ.1 ರವರಿಂದ ನೀವು ಸಾಲ ಪಡೆದುಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಆದ್ದರಿಂದ ನೀವು ನ್ಯಾಯಾಲಯಕ್ಕೆ ಬಂದು ಅವರ ಪರವಾಗಿ ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

3. ಆರೋಪಿಗಳು ಎಲ್ಲರು ನಮ್ಮ ಪಕ್ಕದ ಗ್ರಾಮದವರು ನನಗೆ ಗೊತ್ತಿದೆ. ಆರೋಪಿಗಳು ಎಲ್ಲರು ಮುಖ ಪರಿಚಯ ಇದೆ ವೈಯಕ್ತಿಕವಾಗಿ ಗೊತ್ತಿಲ್ಲ. ಘಟನೆ ನಡೆದಿದೆ ಎಂದು ಹೇಳುತ್ತಿರುವ ಜಾಗದಲ್ಲಿ ಈಗ ಒಂದು ಮನೆ ನಿರ್ಮಾಣವಾಗಿದೆ ಎಂದರೆ ಸರಿ. ಆ ಮನೆಯನ್ನು ನೀವೇ ಕಟ್ಟಿರುತ್ತೀರಾ ಎಂದರೆ ಸರಿ. 8 ನೇ ಆರೋಪಿಯ ಜಾಗದಲ್ಲಿ ಅವರಿಗೆ ನೀವು ಮನೆ ಕಟ್ಟಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಚಾಸಾ.1 ರವರು ನಡೆಸುತ್ತಿರುವ ಗುತ್ತಿಗೆ ಕೆಲಸಗಳಲ್ಲಿ ನೀವು ನಿರಂತರವಾಗಿ ಕೆಲಸ ಮಾಡುತ್ತಿರುತ್ತೀರಾ ಎಂದರೆ ಸರಿಯಲ್ಲ. ಆ ವಿಶ್ವಾಸಕ್ಕಾಗಿ ಚಾಸಾ.1 ರವರು ನಿಮ್ಮನ್ನು ಮಹಜರಿಗೆ ಸಾಕ್ಷೀದಾರರಾಗಲು ಕರೆಸಿದ್ದರು ಎಂದರೆ ಸರಿಯಲ್ಲ. ಚಾಸಾ.1 ರವರು ನಿಮ್ಮನ್ನು ಮಹಜರಿಗೆ ಕರೆದಿದ್ದಾರೆ ಎಂದರೆ ಸರಿ.

3. ನೋಟೀಸನ್ನು ಜಮೀನಿನ ಬಳಿ ಕೊಟ್ಟರು. ನಿಪಿ.5 ನ್ನು ನನಗೆ ಕೊಟ್ಟಾಗ ಮದ್ಯಾಹ್ನ 1.30 ಗಂಟೆಯಾಗಿತ್ತು. ನಿಪಿ.2 ನ್ನು ಮಾಡಿದ ನಂತರ ನಿಪಿ.5 ನ್ನು ನೀಡಿದ್ದಾರೆಂದರೆ ಸರಿ. ನಿಪಿ.2 ರ ಸಂಗತಿಗಳು ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆ ಮೇರೆಗೆ ನೀವು ನಿಪಿ.2 ಕ್ಕೆ ಸಹಿ ಮಾಡಿರುತ್ತೀರಾ ಎಂದರೆ ಸರಿ. ನಿಪಿ.2 ನ್ನು ಮಾಡುವಾಗ ಪೊಲೀಸರ ಜೊತೆ ಚಾಸಾ.1, ನಾನು ಮತ್ತು ಚಾಸಾ.6 ಇದ್ದೆವು. ನಿಪಿ.2 ನ್ನು ಮಾಡಿದ ಸ್ಥಳದ ಚಕ್ಕುಬಂದಿಯನ್ನು ಈಗ ನನಗೆ ಹೇಳಲಾಗುವುದಿಲ್ಲ. ಪೊಲೀಸರು ಸ್ಥಳಕ್ಕೆ

*ಬಂದಿರುವುದಾಗಿ ಬರವಣಿಗೆ ಮಾಡಿಕೊಂಡು ಸಹಿ ಪಡೆದು ಫೋಟೋ ತೆಗೆಸಿದರು. ನಿಪಿ.2 ರ ಬರವಣಿಗೆಗಳನ್ನು ನಾನು ಸ್ಥಳಕ್ಕೆ ಬರುವ ಮೊದಲೇ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ.2 ನ್ನು ಸ್ಥಳದಲ್ಲಿ ಬರೆದರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ.2 ನ್ನು ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸ್ಥಳಕ್ಕೆ ಬಂದು ಪೊಲೀಸರು ಮಾಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮುಮಾ.1 ಮತ್ತು 2 ಎಲ್ಲಾ ರೈತರ ಮನೆಗಳಲ್ಲಿ ಇರುತ್ತವೆ ಎಂದರೆ ಸರಿ. ಚಾಸಾ.1 ರವರ ಪ್ರಭಾವಕ್ಕೆ ಒಳಪಟ್ಟು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***